7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ವೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ ವೊಪರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯು ತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಕಟ್ಟಡಗಳು.		ಜಮೀನು.				ಸದ್ಯಕ್ಕೆ ಬರಬೇಕಾದ ನೋಟೀಸ್ ಫೀ ಸ್ಟ್ಯಾಂಪ್ ಸಹಿತವಾದ ಬಾಕಿ ಹೊಲಿಗಳು.
				ಕಟ್ಟಿದವರ ಹೆಸರು	ಅಂದಾಜು ಕಿಮ್ಮತ್ತು.	ನಂಬರ್ ಖಾನಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಂದಾಜು ಕಿಮ್ಮತ್ತು.	
1	2	3	4	5	6	7	8	9	10	11
					ರೂ. ಆ. ಪೈ.			ಎಕರೆ. ಗುಂಟೆ.	ರೂ. ಆ. ಪೈ.	ರೂ. ಆ. ಪೈ.
ಚೆಕ್ಕನಹಳ್ಳಿಪುರ.	ಪಿಳ್ಳಹಳ್ಳಿಪುರ.	ಜೋಡಿ ಹೊನ್ನೇನಹಳ್ಳಿ ಗ್ರಾಮ.	ಹನುಮಂತಾಚಾರ್ರು ವಗೈರೆರು	..	.. .. ..	ಗ್ರಾಮದಲ್ಲಿ ಬಾಕಿದಾರ್ರಿಗೆ ಇರುವ ಹಿಂಬೆಗಳು.	ಖುಷ್ಕೀ ತರೀ ಬಾಗಾಯತು ಪರಂಪೋಕು	299 11 20 13 38 26 78 20	596 4 0	96 0 5
							ಟೋಟಲ್	436 30		ನೋಟಿಸ್ ಫೀ ವಗೈರೆ 0–12–0
							ಸಾಲಿನಾ ಸರ್ಕಾರಕ್ಕೆ ಕೊಡತಕ್ಕ ಜೋಡಿ	.. ..	ನೀರ್ ಸರದಿ .. 136 0 0	96–12–5 ಹರಾಜ್ ತಾರೀಕ ವರಿಗೆ ಬಡ್ಡಿ ಕೊಡಬೇಕು.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 3ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ ೧೮೯೬–97ನೇ ಸಾಲಿಗೆ, ಅಂದರೆ 1896ನೇ ಜುಲೈ ಗುರ್ತೇ ಲಾಗಾಯುತು 1897ನೇ ಜೂನ್ ವರಿಗೆ, ತುಮಕೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜವಾಯಿಸತಕ್ಕ ಹಕ್ಕನ್ನು ತುಮಕೂರು ತಾಲ್ಲೂಕು ಕಚೇರಿಯಲ್ಲಿ 1896ನೇ ಸೆಪ್ಟಂಬರ್ 4ನೇ ತಾರೀಖಿನ ಬೆಳಿಗ್ಯೆ 11 ಘಂಟೆಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್‌ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ತುಮಕೂರ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರ ಸಾಹೆಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ವಿಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ವಿಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡೆದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು.

5. ಚಡಸವಾಲ್‌ದಾರು, ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಆಯಾ ತಾಲ್ಲೂಕು ಅಮಲ್‌ದಾರ್‌ರಿಂದ ಚಡಸವಾಲ್‌ದಾರ್‌ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳ ಒಳಗಾಗಿ ಚಡಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆ ಯಂತೆ ಆಗುವ ಲೋಕಲ್ ಸೆಸ್ ದೇಖೀಲ್ ಚಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಇಜಾರ್‌ದಾರು ಹಿಡುವಳಿ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೇ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರ್‌ದಾರ ಹಕ್ಕಿಗೆ ಆತಂಕಪಡಿಸಕೂಡದು.

8. ಹಿಡುವಳಿಯಲ್ಲಿಲ್ಲದ ಜಮೀನುಗಳನ್ನ ಸರ್ಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ ಅಭ್ಯಂತರವೇನೂ ಇಲ್ಲ ಪರಂತು ಅಂಥಾ ಜಮೀನುಗಳಲ್ಲಿ ಏಳ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರು ಅಗಿಯಕೂಡದು. ಒಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಿಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಷ್ಟು ಮೇಣ ಕಲ್ಲುಗಳು ಮತ್ತು ಅದು ರಫ್ತಾಗತಕ್ಕ ಸ್ಥಳ ಈ ತಫ್ಸೀಲ್‌ಗಳು ನಮೂದು ಕಂಡು ಆಯಾ ತಾಲ್ಲೂಕು ಅಮಲ್‌ದಾರ್‌ರಿಂದ ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರು ಸಾಗಿಸ ಕೂಡದು.

ತಾರೀಖು 3ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸ॥ 1896–97ನೇ ಸಾಲಿಗೆ ಅಂದರೆ, 1896ನೇ ಜುಲೈ 1ನೇ ತಾರೀಖು ಲಾಗಾಯತು 1897ನೇ ಜೂ॥ 30ನೇ ತಾರೀಖು ವರಿಗೆ ಈ ಕೆಳಗೆ ನಮೂದಾಗುವ ತಿಪಟೂರು ಮತ್ತು ಪಾವಗಡ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆನ್ಸ್‌ಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರಿ ಬಂಜರ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸಿಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನ ಅಮಲ್‌ದಾರ್ ರೂಬರೂಬ್ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜ್ ಮಾಡಲ್ಪಡುತ್ತೆ. ಹರಾಜ್ ಮಧ್ಯಾಹ್ನ 11 ಘಂಟೆಗೆ ಪುರು ಆಗುತ್ತೆ. ಹರಾಜ್ ತುಮಕೂರ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

ತಾಲ್ಲೂಕು.	ಪಸಾರೇ ಜಿನಸಿ.	ತಾರೀಖು.	ಸ್ಥಳ.
ತಿಪಟೂರು.	ಬೆನ್ನಾಯಕನಹಳ್ಳಿ, ಈರ್ಲಗೆರೆ, ಚಿಕ್ಕಮಾರ್ಪನ ಹಳ್ಳಿ, ಕಡೇಹಳ್ಳಿ ಕಾವಲ್, ಕೆಂಜವಮರನಹಳ್ಳಿ, ಆದಿನಾಯಕನಹಳ್ಳಿ, ಲಕ್ಷ್ಮೀಪುರ ಈ ಗ್ರಾಮಗಳಲ್ಲಿರತಕ್ಕ ಅಳಲೇಕಾಯಿ. ಬೀದರಗುಡಿ, ಲಕ್ಕಿಹಳ್ಳಿ ಕಾವಲ್, ಹೊಂಗೆಲಕ್ಷ್ಮೀ ಕಾವಲ್, ಈಚನೂರ ಕಾವಲ್, ಹಾಲ್ಕುರಿಕೆ ಕಾವಲ್‌ಗಳಲ್ಲಿರುವ, 1 ತಾರೆಕಾಯಿ 2 ದಿಂಡಗದ ಗೋಂದು 3 ಕಪಿಲಾರಂಗು 4 ಹೊಂಗೇಬೀಜ 5 ತಂಗಡಿವ್ಯಾಣ 6 ಬ್ಯಾಲದಕಾಯಿ 7 ಪತಂಗ	1896ನೇ ಸೆಪ್ಟಂಬರ್ 5ನೇ ತಾರೀಖು.	ತಿಪಟೂರು.
ಪಾವಗಡ.	1 ಜೇನುತುಪ್ಪ 2 ಕಲ್ಲುಹುವ್ವು 3 ಅಳಲೇಕಾಯಿ 4 ತಗರಸುಬೀಜ 5 ಮಡ್ಡಿಚಕ್ಕೆ 6 ಶೀತಾಫಲ	1896ನೇ ಸೆಪ್ಟಂಬರ್ 8ನೇ ತಾರೀಖು.	ಪಾವಗಡ.

2. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಕಟ್ಟುತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್‌ರಿಂದ ಚಡಸವಾಲ್‌ದಾರ್‌ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ಒಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕಿಪ್ತ ಕಾಲದ ವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೇವಣಾತಿ ಇಟ್ಟು ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಆದರೆ ಮುನರೇ ಹರಾಜಿನಲ್ಲಿ ವುಂಟಾಗುವ ಛಾಯಿದೆ ಭಾಗ ದರಖಾಸ್ತುದಾರನು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಅಡಗಿರುವದಿಲ್ಲ.

ಎಂ. ನಾರಾಯಣರಾವ್,
ಡಿಪ್ಯುಟಿ ಕಮ್ಮಿಷನರ್.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ.

ನೋಟಿಸ್.

ತಾರೀಖು 10ನೇ ಆಗಸ್ಟ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೈಸೂರು ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸ್ ಸಬ್ ಡಿವೀರ್ಜ್.

1. ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ.

(1)	ಕನ್ನಂಬಾಡಿ ಹೋಬಳಿ ಪೈಕಿ.	ಬಲ್ಲೇನಹಳ್ಳಿ ಕಾವಲ್, ಬಿಂಡಹಳ್ಳಿ ಕಾವಲ್.
(2)	ಅಕ್ಕಹೆಬ್ಬಾಳು ಹೋಬಳಿ ಪೈಕಿ.	ಆಲಂಬಾಡಿ ಕಾವಲ್, ಬೆಳ್ಳೇಬೆಟ್ಟದ ಕಾವಲ್.

2. ನಾಗಮಂಗ್ಲ ತಾಲ್ಲೂಕಿಗೆ ಶೇರಿದ.

(1)	ಕನಬೂ ಹೋಬಳಿ ಪೈಕಿ.	ಬನವನಳ್ಳೂ ಮತ್ತು ಕೊತ್ತೀಪುರದ ಕಾವಲ್.
(2)	ಹಂಪಾಪುರದ ಫರಕಾ.	ನಾಗನಕೆರೆ ಕಲ್ಲಗೇರೆ ಕಾವಲ್.

3. ಶ್ರೀರಂಗಪಟ್ಟಣದ ತಾಲ್ಲೂಕಿಗೆ ಶೇರಿದ.

(1)	ಬಳಗುಳ್ಳದ ಹೋಬಳಿ ಪೈಕಿ.	ಕುರಗಳ್ಳಿ, ಬಸ್ತೀಪುರ ಪ್ಯಾಟೇರ್ಷ ಸಮೀಪಗಳಲ್ಲಿ.

(4) ಕೃಷ್ಣರಾಜಪೇಟೆ ತಾಲ್ಲೂಕಿಗೆ ಶೇರಿದ ಡಿಸ್ಟ್ರಿಕ್ಟು ಜಂಗಲ್‌ಗಳೂ ಮತ್ತು ಬೀಬಿಬೆಟ್ಟದ ಜಂಗಲ್ ಸಹ.

ಸ್ಯ 1897ನೇ ಇಸವಿ ಜಾರ್ ಆಖೈರ್ ವರಿಗೆ ಈ ಮೇಲ್ಕಂಡವುಗಳಲ್ಲಿ ವುತ್ಪತ್ತಿ ಆಗುವ ಶೀಗೇಕಾಯಿ, ಅಳಲೇಕಾಯಿ, ದಿಂಡ್ಲು ಗೋಂದು, ಹೊಂಗೇಬೀಜ, ಜೇನುವ್ಯಾಣ, ಜೇನುತುಪ್ಪ, ಹುಣಚೇಹಣ್ಣು ಈ ಬಾಬ್ತುಗಳ 1896ನೇ ಇಸವಿ ಸೆಪ್ಟಂಬರ್ ತಾರೀಖು (2)ರಲ್ಲು ಜಿನಕುರ್ಲಿ ಮುಸಾಫರ್ ಬಂಗ್ಲೆಯಲ್ಲಿ ಡಿಸ್ಟ್ರಿಕ್ಟು ಅಥವಾ ಸಬ್ ಡಿವೀರ್ಜ್ ಫಾರೆಸ್ಟ್ ಆಫಿಸರವರು ಹರಾಜು ಮಾಡಿಸುತ್ತಾರೆ.

2. ದರಖಾಸ್ತಿನಲ್ಲಿ ಮುಂಜಾರಾದ ಜಿನಸಿ ಮೊತ್ತವನ್ನು 1897ನೇ ಇಸವಿ ಏಪ್ರಿಲ್ ಆಖೈರ್ ವಳಗಾಗಿ ಬಗರ್ ಲಾಗವಡಿನಿಂದ ಶ್ರೀರಂಗಪಟ್ಟಣದ ಸಂದಲ್ ಕೋಠಿಗೆ ಪಾವತಿ ಮಾಡಿ ದರೋಗರಿಂದ ರಸೀತಿ ಪಡಿಯಬೇಕು.

3. ದರಖಾಸ್ತು ಮುಂಜಾರಾದವಷ್ಟೆ ಚಕಡದರಖಾಸ್ತುದಾರನು ದರಖಾಸ್ತಿನ ಮೇರೆ ನಡದುಕೊಳ್ಳತಕ್ಕ ಬಗ್ಗೆ (50) ರೂಪಾಯಿಗಳು ಡಿಪಾಜಿಟ್ ಯಿಟ್ಟು ಛಾಪಾಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಮತ್ತು ಖಾತರ್ ಜಾಮೀನ್ ಸಹ ಕೊಡಬೇಕು.

4. ಮೇಲ್ಕಂಡ ಡಿಪಾಜಿಟ್ ಮೊಬಲಗು ಕೂಡಲೆ ಪಾವತಿ ಮಾಡದೆ ಇದ್ದರೆ ಪುನಹ ಹರಾಜು ಕ್ರಮ ನಡಸಿ ಅದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲ್ ದರಖಾಸ್ತುದಾರನ್ನ ಗುರಪಡಿಸುತ್ತೆ. (2)ನೇ ದರಖಾಸ್ತಿನಲ್ಲಿ ಮೊದಲ್ ದರಖಾಸ್ತಿಗಿಂತಾ ಸರ್ಕಾರಕ್ಕೆ ಜಾಸ್ತಿ ವುತ್ಪತ್ತಿ ವುಂಟಾದಲ್ಲಿ ಡಿಟೋ ಜಾಸ್ತಿಗೆ ಮೊದಲು ದರಖಾಸ್ತುದಾರನಿಗೆ ಯೇನೂ ಹಕ್ಕು ಇರುವದಿಲ್ಲ.

5. ಮೇಲ್ಕಂಡ ಪಾಯಿದೆಯಲ್ಲಿ ಜಿನಸಿಗಳನ್ನ ಕೋಠಿಗೆ ದರಖಾಸ್ತುದಾರನು ಪಾವತಿಮಾಡಿ ರಸೀತಿ ಹಾಜರ್ ಮಾಡದೆ ಯಿದ್ದಲ್ಲಿ ದರಖಾಸ್ತುದಾರನ ಡಿಪಾಜಿಟ್ ಮೊಬಲಗನ್ನ ಸರ್ಕಾರಕ್ಕೆ ಮುಫತ್ತಾಗಿ ಶಿವಾಜಮೆಗೆ ದಾಖಲ್ಮಾಡಿಕೊಳ್ಳುವದಲ್ಲದೆ ಫಸಲನ್ನ ಅಮಾನಿಯಾ ಇತರ ವಿಧವಾಗಿ ರೂಢಿಸಿ ಅದರಲ್ಲಿ ವುಂಟಾಗುವ ನಷ್ಟಕ್ಕೆ ಮೊದಲು ದರಖಾಸ್ತುದಾರನನ್ನೂ ಮತ್ತು ಜಾಮೀರ್‌ದಾರನನ್ನೂ ಸಹ ಗುರಿಮಾಡಲ್ಪಾಗುತ್ತೆ.

6. ದರಖಾಸ್ತು ಮಂಜೂರ್ ಯಾ ನಾ ಮಂಜೂರ್ ಮಾಡತಕ್ಕ ಹಕ್ಕು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಯಿಟ್ಟುಕೊಂಡಿರುತ್ತಾರೆ.